ಹಳೆಯ ವಿದ್ಯುತ್ ತಂತಿ ಹಾಗೂ ಕಂಬಗಳನ್ನು ಬದಲಾಯಿಸುವುದು

1879 (3073); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ವಾಹನಕ್ಕೆ ಅಳವಡಿಸಿರುವ ಸುಮಾರು 20 ವರ್ಷಗಳಿಗಿಂತ ಮೊದಲಿನ ವಿದ್ಯುತ್ ತಂತಿ, ಕಬ್ಬಿಣದ ಕಂಬಗಳು ಎಷ್ಟು ಕಿ. ಮೀಟರ್ ವ್ಯಾಪ್ತಿಯಲ್ಲಿ ಇವತ್ತಿಗೂ ಬದಲಾಗದೇ ಉಳಿದಿದೆ (ಸಂಪೂರ್ಣ ವಿವರ ನೀಡುವುದು);

ಆ) ಈ ಹಳೆ ವಿದ್ಯುತ್ ತಂತಿ ಹಾಗೂ ಹಳೆ ಕಬ್ಬಿಣದ ಸಾರ್ವಜನಿಕರ ಜೀವಕ್ಕೆ ಅಪಾಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಹಳೆ ಕಬ್ಬಿಣದ ಕಂಬಗಳನ್ನು ಹಾಗೂ ತಂತಿಗಳನ್ನು ಎಷ್ಟು ದಿನದೊಳಗಾಗಿ ಬದಲಾವಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿನ ವಿದ್ಯುತ್ ಮಾರ್ಗಕ್ಕೆ ಅಳವಡಿಸಿರುವ ಸುಮಾರು 20 ವರ್ಷದಷ್ಟು ಹಳೆಯದಾದ ವಿದ್ಯುತ್ ತಂತಿ ಹಾಗೂ ಕಬ್ಬಿಣದ ಕಂಬಗಳು ಬದಲಾವಣೆ ಆಗಬೇಕಾಗಿರುವ ವಿವರಗಳು ಈ ಕೆಳಗಿನಂತಿವೆ.

ವಿದ್ಯುತ್ ಮಾರ್ಗ	ಕಬ್ಬಿಣದ ಕಂಬಗಳು (ಸಂಖ್ಯೆ)	ವಿದ್ಯುತ್ ತಂತಿಗಳು (ಕಿ.ಮೀ.)
ಹೆಚ್. ಟಿ.	444	1197.18
ಎಲ್. ಟಿ.	1230	2099.34

ಆ) ವಿದ್ಯುತ್ ತಂತಿಗಳು ಮತ್ತು ಕಬ್ಬಿಣದ ಕಂಬಗಳು ಹವಾಮಾನ ವೈಪರಿತ್ಯಗಳಿಗೆ ಒಳಗಾಗುವುದರಿಂದ ಜೋತು ಬೀಳುವುದು ಮತ್ತು ತುಕ್ಕು ಹಿಡಿಯುವ ಸಂಭವ ಇರುತ್ತದೆ. ಅಂತಹ ಹಳೆಯದಾದ

ವಿದ್ಯುತ್ ತಂತಿ ಮತ್ತು ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿನ ಕಾಮಗಾರಿಗಳು

1880 (3074); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ ಎಸ್.ಹೆಚ್.ಡಿ.ಪಿ.1 ಮತ್ತು 2 ಹಾಗೂ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. (ಸಂಪೂರ್ಣ ವಿವರ ನೀಡುವುದು);

ಆ) ಎಷ್ಟು ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿದಿವೆ; ಎಷ್ಟು ವಿಳಂಬವಾಗಿವೆ; ವಿಳಂಬವಾಗಲು ಕಾರಣರಾದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

ಇ) ನಿಗದಿತ ಕಾಲಮಿತಿಯಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಎಸ್.ಹೆಚ್.ಡಿ.ಪಿ: ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಹಂತ–01 ರಲ್ಲಿ ಮೂರು ಕಾಮಗಾರಿಗಳು ಮತ್ತು ಹಂತ–02 ರಲ್ಲಿ ಒಂದು ಕಾಮಗಾರಿ ಒಟ್ಟು ನಾಲ್ಕು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಹಂತ–1

1. ಹುಮ್ನಾಬಾದ್–ಬೀದರ್ ರಾಜ್ಯ ಹೆದ್ದಾರಿ ಸಂಖ್ಯೆ– 105 ಸರಪಳಿ 0.00 ರಿಂದ 45.40 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ ಅಂದಾಜು ಮೊತ್ತ `1307.00 ಲಕ್ಷಗಳು (ಪ್ಯಾಕೇಜ್ ಸಂಖ್ಯೆ–35)